**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ.ನಂ.856/2021**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಮಂಜಪ್ಪ ತೆಪ್ಪದ | ಪಿಡಬ್ಲ್ಯೂ | 6 |
| ತಂದೆಃಗಂಡನ ಹೆಸರು | : | ನಿಂಗಪ್ಪ | ಸಿಡಬ್ಲ್ಯೂ | 6 |
| ವಯಸ್ಸು | : | 52 ವರ್ಷ | | |
| ಉದ್ಯೋಗ | : | ವ್ಯವಸಾಯ | | |
| ವಾಸ ಸ್ಥಳ | : | ಬಾಳಂಬೀಡ | | |

**ದಿನಾಂಕ:15-06-2022 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ಚಾಸಾ-1 ನನ್ನ ದೊಡ್ಡಪ್ಪನ ಮಗ, ಚಾಸಾ-4 ಚಾಸಾ-1 ರವರ ಮಗ, ಚಾಸಾ-5 ನನ್ನ ದೊಡ್ಡಪ್ಪನ ಮಗನ ಹೆಂಡತಿ, ಚಾಸಾ-7 ನನ್ನ ಚಿಕ್ಕಪ್ಪನ ಮಗ, ಚಾಸಾ-8 ನನ್ನ ಮಾವ, ಚಾಸಾ-9 ಮತ್ತು 10 ರವರು ಸಹ ಪರಿಚಯಸ್ಥರು. ನನಗೆ ಆರೋಪಿತರ ಪರಿಚಯ ಇದೆ. ನನಗೆ ಈ ಕೇಸಿನ ಬಗ್ಗೆ ಮಾಹಿತಿ ಇದೆ. ಕಳೆದ ಆರು ವರ್ಷಗಳ ಹಿಂದೆ ಮುಂಜಾನೆ 10.00 ಗಂಟೆ ಸಮಯದಲ್ಲಿ ಚಾಸಾ-1, 4 ಮತ್ತು 5 ರವರು ಅವರ ಜಮೀನಿನಲ್ಲಿ ಗೋವಿನ ಜೋಳ ಬಿತ್ತುತ್ತಿರುವಾಗ, ಆರೋಪಿತರು ಸಹ ಗೋವಿನ ಜೋಳ ಬಿತ್ತಲು ಆ ಜಮೀನಿಗೆ ಬಂದರು. ಆ ಸಂದರ್ಭದಲ್ಲಿ ಆರೋಪಿತರೆಲ್ಲರೂ ಚಾಸಾ-1, 4 ಮತ್ತು 5 ರವರಿಗೆ ಬಡಿಗೆಯಿಂದ ಹೊಡೆಬಡಿ ಮಾಡುತ್ತಿದ್ದರು. ಅಲ್ಲದೇ ಅವಾಚ್ಯ ಶಬ್ದಗಳಿಂದ ಬೈದರು. ಈ ಗಲಾಟೆಯನ್ನು ಚಾಸಾ-7 ರಿಂದ 10 ರವರು ಬಿಡಿಸಿದರು. ಅದೇ ರೀತಿ ಆರೋಪಿತರೆಲ್ಲರೂ ಚಾಸಾ-1, 4 ಮತ್ತು 5 ರವರಿಗೆ ಜೀವ ಬೆದರಿಕೆ ಹಾಕಿದರು. 3 ನೇ ಆರೋಪಿ ಚಾಸಾ-1 ರವರಿಗೆ ಬಡಿಗೆಯಿಂದ ಹಲ್ಲೆ ಮಾಡಿದರು. ಚಾಸಾ-5 ರವರಿಗೆ ಆರೋಪಿತರೆಲ್ಲರೂ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿದರು. ಆರೋಪಿತರೆಲ್ಲರೂ ಚಾಸಾ-5 ರವರಿಗೆ ಸೀರೆ ಹಿಡಿದು

ಜಗ್ಗಾಡಿದರು. ಆ ನಂತರ ಚಾಸಾ–1 ರವರು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದರು. ಈ ಘನಟೆಗೆ ಸಂಬಂಧ ಪೊಲೀಸರು ನನ್ನ ಹೇಳಿಕೆ ಪಡೆದರು. ಆ ದಿನ ಆರೋಪಿತರು ಹಲ್ಲೆಗೆ ಬಳಸಿದ ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ–1 ಮತ್ತು 2 ಎಂದು ಗುರುತಿಸಲಾಗಿದೆ.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ**

ಈ ಗಲಾಟೆಯು ದಿಃ12–06–2016 ರಂದು ಮುಂಜಾನೆ 10.00 ಗಂಟೆ ಸಮಯಕ್ಕೆ ಈ ಗಲಾಟೆ ಆಯಿತು ಎನ್ನುವುದು ಸರಿ. ಆರೋಪಿತರೆಲ್ಲರೂ ಬಡಿಗೆಯಿಂದ ಚಾಸಾ–1, 4 ಮತ್ತು 5 ರವರಿಗೆ ಹಲ್ಲೆ ಮಾಡಿದರು ಎನ್ನುವುದು ಸರಿ. ಆಗ 3 ನೇ ಆರೋಪಿ ಚಾಸಾ–5 ರವರ ಸೀರೆ ಮತ್ತು ಜಂಪರ್ ಹಿಡಿದು ಜಗ್ಗಾಡಿ ಮಾನಭಂಗ ಮಾಡಲು ಪ್ರಯತ್ನಿಸಿದರು ಎಂದರೆ ಸರಿ. ಆರೋಪಿತರೆಲ್ಲರೂ ಚಾಸಾ–5 ರವರಿಗೆ ಕಾಲಿನಿಂದ ಒದ್ದು ಹಲ್ಲೆ ಮಾಡಿದರು ಎನ್ನುವುದು ಸರಿ.

**:ಪಾಟೀ ಸವಾಲು: ಆರೋಪಿತರ ಪರ ಶ್ರೀ.ಆರ್.ಯು.ಪಿ ವಕೀಲರಿಂದ:**

ಈ ಘಟನೆಗೆ ಸಂಬಂಧಪಟ್ಟಂತೆ ಆರೋಪಿತರು ನಮ್ಮ ವಿರುದ್ಧವೂ ಸಹ ಮತ್ತೊಂದು ಕ್ರಿಮಿನಲ್ ಪರಕರಣ ದಾಖಲಿಸಿದ್ದು, ಅದರಲ್ಲಿ ನನ್ನ ಸಹಿತ 17 ಜನ ನ್ಯಾಯಾಲಯಕ್ಕೆ ಬರುತ್ತಿದ್ದೆವು ಎಂದರೆ ಸರಿ. ಆ ಪ್ರಕರಣದಲ್ಲಿ ನಾನು 1 ನೇ ಆರೋಪಿಯಾಗಿದ್ದೇನೆ. ನನ್ನ ಹಾಗೂ ನನ್ನ ಅಣ್ಣ ತಮ್ಮಂದಿರ ವಿರುದ್ಧ ಹಾವೇರಿ ಜಿಲ್ಲಾ ನ್ಯಾಯಾಲಯದಲ್ಲಿಯೂ ಸಹ ಕ್ರಿಮಿನಲ್ ಪ್ರಕರಣ ನಡೆಯುತ್ತಿದ್ದೆ ಎನ್ನುವುದು ಸರಿ . ಚಾಸಾ–1 ಮತ್ತು 4 ರವರು ಕಳೆದ 30–40 ವರ್ಷಗಳಿಂದ ತಿಳವಳ್ಳಿಯಲ್ಲಿ ವಾಸವಿದ್ದಾರೆ ಎಂದರೆ ಸರಿ. ಅವರಿಗೆ ಸಂಬಂಧಪಟ್ಟ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ತಿಳವಳ್ಳಿ ಗ್ರಾಮದಲ್ಲಿವೆ. ಚಾಸಾ–5 ರವರು ಅವರ ಗಂಡ ಮೃತಪಟ್ಟ ನಂತರ 1 ನೇ ಆರೋಪಿಯ ಜೊತೆ ವಾಸವಾಗಿದ್ದರು ಎನ್ನುವುದು ಸರಿ. ಚಾಸಾ–5 ರವರು 1 ನೇ ಆರೋಪಿಯ ಜೊತೆ ವಾಸವಾಗಿದ್ದ ಕಾರಣ ಅವರ ಕುಟುಂಬದ

ಆಸ್ತಿಗಳಲ್ಲಿ ಹಿಸ್ಸೆ ಕೇಳುವ ಪ್ರಸಂಗ ಬಂದಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ–5 ರವರಿಗೆ ಮಕ್ಕಳು ಇರುವುದಿಲ್ಲ. ನಾನು ಮತ್ತು ಚಾಸಾ–1 ರವರು 1 ನೇ ಆರೋಪಿಗೆ ಸಂಬಂಧಪಟ್ಟ ಜಮೀನುಗಳನ್ನು ಬರೆದುಕೊಡುವ ಉದ್ದೇಶದಿಂದ ಚಾಸಾ–4 ರವರ ಮೂಲಕ ಪ್ರಕರಣ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಈ ಘಟನೆಯಾದ ಸಂದರ್ಭದಲ್ಲಿ ಆ ಹಿಸ್ಸೆಯ ಪ್ರಕರಣ ಚಾಲ್ತಿಯಲ್ಲಿತ್ತು. ಆ ದಾವೆಯು ನನ್ನ ಗಂಡನಿಗೆ ಬರುವ ಆಸ್ತಿಯಲ್ಲಿ ಹಿಸ್ಸೆ ಕೊಡುವಂತೆ ಕೋರಿ ಸಲ್ಲಿಸಲಾಗಿತ್ತು. ಚಾಸಾ–5 ರವರು 1 ನೇ ಆರೋಪಿಯ ಕುಟುಂಬದಲ್ಲಿ ಯಾವುದೇ ಆಸ್ತಿಯಲ್ಲಿ ಕಬ್ಜಾ ಕೊಟ್ಟಿಲ್ಲ ಎಂದು ದಾವೆ ಸಲ್ಲಿಸಿದರು. 2011 ನೇ ಇಸ್ವಿಗಿಂತ ಮೊದಲೇ ಆ ವಾಟ್ನಿ ದಾವೆಯನ್ನು ಸಲ್ಲಿಸಲಾಗಿತ್ತು. ಗಲಾಟೆಯಾದ ದಿನಾಂಕ ನನಗೆ ನಿಖರವಾಗಿ ಗೊತ್ತಿಲ್ಲ. ಘಟನೆಯಾದ ಸಂದರ್ಭದಲ್ಲಿ ನಾನು ಸಹ ನಮ್ಮ ಹೊಲದಲ್ಲಿ ಬಿತ್ತನೆ ಹಾಕುತ್ತಿದ್ದೆ. ಆ ಘಟನೆಯಾದಾಗ ಆ ಸ್ಥಳದಲ್ಲಿ ಸುಮಾರು 10 ರಿಂದ 15 ಜನ ಇದ್ದರು. ಆ ಸ್ಥಳದಲ್ಲಿ 10 ರಿಂದ 15 ಜನರ ಹೆಸರು ನನಗೆ ಗೊತ್ತು. ಆ ಸ್ಥಳದಲ್ಲಿ ನಮ್ಮ ಮನೆತನದವರು ಸಹ ಇದ್ದರು. ಆ ಸಂದರ್ಭದಲ್ಲಿ ಯಾರು ಯಾರಿಗೆ ಯಾವ ಜಾಗಕ್ಕೆ ಹಲ್ಲೆ ಮಾಡಿದರು ಎಂಬುದು ನನಗೆ ನಿಖರವಾಗಿ ಗೊತ್ತಿಲ್ಲ. ಈ ಘಟನೆಯ ಸಂಬಂಧ ಪೊಲೀಸರು ನನ್ನ ಹೇಳಿಕೆ ಪಡೆದರು. ಗಲಾಟೆಯಾದ ದಿನವೇ ಪೊಲೀಸರು ನನ್ನ ಹೇಳಿಕೆ ಪಡೆದರು. ನನ್ನ ಹೇಳಿಕೆಯಲ್ಲಿ ಗಲಾಟೆಯಾದ ವಿಷಯವನ್ನು ಕೇಳಿ ಆ ಸ್ಥಳಕ್ಕೆ ಬಂದೆನು ಎಂಬುದಾಗಿ ಹೇಳಿ ಬರೆಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ಚಾಸಾ–1 ಮತ್ತು 5 ರವರ ಮೇಲೆ ಹಲ್ಲೆಯಾದ ಕಾರಣ ರಕ್ತಗಾಯಗಳಾಗಿದ್ದು. ಈ ಸಂಬಂಧವಾಗಿ ಪೊಲೀಸರು ಆ ರಕ್ತ ಸಿಕ್ತ ಬಟ್ಟೆಯನ್ನು ಜಪ್ತು ಮಾಡಿದರು. ಗಲಾಟೆಯಾದ ಮಧ್ಯಾಹ್ನದ ನಂತರ ಪೊಲೀಸರು ಆ ಸ್ಥಳಕ್ಕೆ ಬಂದರು. ಚಾಸಾ–5 ರವರು 3 ನೇ ಆರೋಪಿಗೆ ಚಿಕ್ಕಮ್ಮನಾಗಬೇಕು.

3 ನೇ ಆರೋಪಿ ಚಾಸಾ–5 ರವರ ಮಾನಭಂಗ ಮಾಡಲು ಸೀರೆ ಜಗ್ಗಾಡಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ–5 ರವರನ್ನು ಹಿಂದಿನಿಂದಲೂ ಸಹ ತಮ್ಮ ಜೊತೆಯಲ್ಲಿ ಇಟ್ಟುಕೊಂಡು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಚಾಸಾ–5 ರವರಿಗೆ ಬರಬೇಕಾದ ಆಸ್ತಿಯನ್ನು ಎತ್ತಿಹಾಕಿಸಿಕೊಳ್ಳುವ ಉದ್ದೇಶದಿಂದ ನಾನು ಮತ್ತು ಚಾಸಾ–1 ರವರು ಚಾಸಾ–5 ರವರ ಮೂಲಕ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಅವರ ಜಮೀನಿನಲ್ಲಿ ಬಿತ್ತನೆ ಬಿತ್ತಲು ಹೋಗುವ ಸಂದರ್ಭದಲ್ಲಿ ನಾವು 17 ಜನ ಆರೋಪಿತರಿಗೆ ಹಲ್ಲೆ ಮಾಡಿ ಈ ಸಂಬಂಧವಾಗಿ ಅವರು ದೂರು ನೀಡಿದ ಕಾರಣ ಅದರಿಂದ ತಪ್ಪಿಸಿಕೊಳ್ಳಲು ಈ ಸುಳ್ಳು

ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್